*MVC No: 7947/2023*
*PW-2*

**<u>ಸಾಕ್ಷಿಗೆ ದಿನಾಂಕ 11.09.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: *1* ಮತ್ತು *2* ನೇ ಎದುರುದಾರರ ಪರ ಶ್ರೀಮತಿ ಎಸ್ ಆರ್ ವಕೀಲರಿಂದ:</u>**

1. ಅರ್ಜಿದಾರರು ನನಗೆ ವೈಯಕ್ತಿಕ ಪರಿಚಯವಿರುವುದಿಲ್ಲ. ಅರ್ಜಿದಾರರಿಗೆ ನಾನು ವೈಯಕ್ತಿಕವಾಗಿ ಚಿಕಿತ್ಸೆ ನೀಡಿಲ್ಲ. ಅರ್ಜಿದಾರರು ತಮಗೆ ಉಂಟಾಗಿದ್ದ ಗಾಯದ ಬಗ್ಗೆ ಹೇಳಿದ್ದರ ಆಧಾರದ ಮೇಲೆ ದೈಹಿಕ ಅಂಗನ್ಯೂನತೆಯನ್ನು ನಿರ್ಧರಿಸಿರುತ್ತೇನೆ ಎಂದರೆ ಅರ್ಜಿದಾರರ ಡಿಸ್ಚಾರ್ಜ್ ಸಮ್ಮರಿ ಮತ್ತು ಅವರನ್ನು ಪರಿಶೀಲಿಸಿ ಅಂಗನ್ಯೂನತಾ ಶೇಕಡಾ ಪ್ರಮಾಣ ನಿರ್ಧರಿಸಿರುತ್ತೇನೆ. ಅರ್ಜಿದಾರರಿಗೆ ನಾನು ಯಾವುದೇ ಚಿಕಿತ್ಸೆ ನೀಡದೇ ಇರುವುದರಿಂದ ಅವರಿಗೆ ಅಂಗನ್ಯೂನತೆಯನ್ನು ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ.

2. ಅರ್ಜಿದಾರರು ಪಡೆದ ಮುಂದುವರೆದ ಚಿಕಿತ್ಸಾ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಅರ್ಜಿದಾರರಿಗೆ ಚಿಕಿತ್ಸೆ ನೀಡಿದ ವೈದ್ಯರು ಅರ್ಜಿದಾರರ ದೈಹಿಕ ಅಂಗನ್ಯೂನತಾ ಪ್ರಮಾಣವನ್ನು ನಿರ್ಧರಿಸಲು ಶಿಫಾರಸ್ಸು ಮಾಡಿರುವುದಿಲ್ಲ. ಅರ್ಜಿದಾರರಿಗೆ ನಾನು ಕ್ಲಿನಿಕಲ್ ಪರೀಕ್ಷೆ ಮಾಡಿಸದೇ ಸುಳ್ಳು ಅಂಗನ್ಯೂನತೆಯನ್ನು ನಿರ್ಧರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿದಂತೆ ಅರ್ಜಿದಾರರಿಗೆ ಯಾವುದೇ ತೊಂದರೆಗಳು ಇರುವುದಿಲ್ಲ ಹಾಗೂ ಕೆಲವು ಗಾಯಗಳು ವಾಸಿಯಾಗಿವೆ ಎಂದರೆ ಸರಿಯಲ್ಲ.

3. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ 5ನೇ ಕಂಡಿಕೆಯಲ್ಲಿ ಹೇಳಿದಂತೆ ಅರ್ಜಿದಾರರ ಕ್ಲಿನಿಕಲ್ ತಪಾಸಣೆ ಮಾಡದೇ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ 6ನೇ ಕಂಡಿಕೆಯಲ್ಲಿ ಅರ್ಜಿದಾರರ ಮೂಳೆ ಮುರಿತ ಕೂಡಿಕೊಂಡಿಲ್ಲ ಎಂದು ಹೇಳಿದ್ದು ಅದು ಚಿಕಿತ್ಸೆ ನೀಡಿದ ವೈದ್ಯರ ನಿರ್ಲಕ್ಷ್ಯತನದಿಂದ ಆಗಿದೆ ಎಂದರೆ ಸರಿಯಲ್ಲ. ಅರ್ಜಿದಾರರು ಮುಂದುವರೆದ ಚಿಕಿತ್ಸೆಯನ್ನು ತೆಗೆದುಕೊಳ್ಳದೇ ಹಾಗೂ ವೈದ್ಯರ ಸಲಹೆಯನ್ನು ಸರಿಯಾಗಿ ಪಾಲಿಸದೇ ಇರುವುದರಿಂದ ಅರ್ಜಿದಾರರ ಮೂಳೆಮುರಿತ ಕೂಡಿಕೊಂಡಿರುವುದಿಲ್ಲ ಎಂದರೆ

ಸರಿಯಲ್ಲ. ಅರ್ಜಿದಾರರ ಒಳಜೋಡಣೆಯನ್ನು ತೆಗೆಯದೇ ಅವರ ದೈಹಿಕ ಅಂಗನ್ಯೂನತಾ ಶೇಕಡಾ ಪ್ರಮಾಣವನ್ನು ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ.

4. ಅರ್ಜಿದಾರರ ಚಿಕಿತ್ಸೆ ಇನ್ನೂ ಪೂರ್ಣಗೊಂಡಿರುವುದಿಲ್ಲ. ಅರ್ಜಿದಾರರಿಗೆ ಚಿಕಿತ್ಸೆ ಇನ್ನೂ ಪೂರ್ಣಗೊಂಡಿರದೇ ಇರುವುದರಿಂದ ಅವರ ದೈಹಿಕ ಅಂಗನ್ಯೂನತೆಯನ್ನು ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ತಮ್ಮ ದೈನಂದಿನ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ. ಅರ್ಜಿದಾರರಿಗೆ ಯಾವುದೇ ತೊಂದರೆ ಇಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಾನು ದೈಹಿಕ ಅಂಗನ್ಯೂನತಾ ಪ್ರಮಾಣಪತ್ರ ನೀಡಿರುವುದಿಲ್ಲ.

5. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿದ ದೈಹಿಕ ಶೇಕಡಾವಾರು ಪ್ರಮಾಣವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯ ಅನ್ವಯ ನಿರ್ಧರಿಸಿರುತ್ತೇನೆ. ಅರ್ಜಿದಾರರಿಗೆ ಮಾನವೀಯತೆಯಿಂದ ಶೇ.78 ರಷ್ಟನ್ನು ಹೆಚ್ಚಾಗಿ ನಿರ್ಧರಿಸಿರುತ್ತೇನೆ ಎಂದರೆ ಸರಿಯಲ್ಲ. ಸರಳ ವರ್ಮಾ ಪ್ರಕರಣದ ಪ್ರಕಾರ ನಿಗಧಿತ ಅಂಗಕ್ಕೆ ನೀಡಲಾದ ದೈಹಿಕ ಅಂಗನ್ಯೂನತೆಯ ಶೇಕಡವಾರು ಪ್ರಮಾಣದ 1/3 ರಷ್ಟು ಸಂಪೂರ್ಣ ದೇಹಕ್ಕೆ ದೈಹಿಕ ಅಂಗನ್ಯೂನತೆಯನ್ನು ಪರಿಗಣಿಸಬೇಕು ಎಂದರೆ ಸರಿಯಲ್ಲ. ಈ ಕಾರಣದಿಂದ ಅರ್ಜಿದಾರರಿಗೆ ನಾನು ಶೇ.39 ರಷ್ಟು ಹೆಚ್ಚಾಗಿ ಅಂಗನ್ಯೂನತೆಯನ್ನು ನಿರ್ಧರಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**